1	2	3	4	5	6
6)	**ಬೆಳ್ತಂಗಡಿ ತಾಲ್ಲೂಕು**				
1.	ಪ.ವರ್ಗದ ಆಶ್ರಮಶಾಲೆ, ನಾರಾವಿ,	3	4	3	1
2.	-"- -"- ಧರ್ಮಸ್ಥಳ	4	5	1	1
3.	-"- -"- ನರಿಯಾ	4	5	1	3
4.	-"- -"- ಶೀಶೈಲ	2	3	1	-
7)	**ಉಡುಪಿ ತಾಲ್ಲೂಕು**				
1.	ಪ.ವರ್ಗದ ಆಶ್ರಮಶಾಲೆ, ಬನ್ನಂಜೆ	5	5	3	1
8)	**ಕುಂದಾಪುರ ತಾಲ್ಲೂಕು**				
1.	ಪ.ವರ್ಗದ ಆಶ್ರಮಶಾಲೆ ಕುಂದಾಪುರ	3	4	2	-
2.	-"- -"- .ಬೈಂದೂರು	2	2	-	-
3.	-"- -"- ಆರ್ಡಿ	2	2	-	-
	ಒಟ್ಟು 20 ಆಶ್ರಮಶಾಲೆಗಳು	**53**	**70**	**20**	**15**

ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ಆಯವ್ಯಯದ ಹಂಚಿಕೆ.

2970 - ಶ್ರೀಮತಿ ಡಿ. ಜಿ. ಹೇಮಾವತಿ (ಶಾಂತಿನಗರ) : ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ1997-98ನೇ ಸಾಲಿನ ಆಯವ್ಯಯದಲ್ಲಿ ನಿಗದಿಪಡಿಸಿರುವ ಒಟ್ಟು ಮೊತ್ತವೆಷ್ಟು?

ಆ) 1996-97ನೇ ಸಾಲಿನಲ್ಲಿ ಎಷ್ಟು ಜನ ಅಲ್ಪಸಂಖ್ಯಾತರುಗಳಿಗೆ ಸಹಾಯ ಒದಗಿಸಲಾಗಿದೆ?

ಇ) ಅಲ್ಪಸಂಖ್ಯಾತರ ಅಭಿವೃದ್ಧಿಗೆ ವಿವಿಧ ಕಾರ್ಯಕ್ರಮಗಳಿಗೆ ನಿಗದಿಪಡಿಸಿದ ಮೊತ್ತವು ಸಾಕಾಗುವುದೇ?

ಈ) 1997-98ನೇ ಸಾಲಿಗೆ ಹೆಚ್ಚುವರಿ ಮೊತ್ತವನ್ನು ಆಯವ್ಯಯದಲ್ಲಿ ಅಳವಡಿಸಿರುವ ಪ್ರಸ್ತಾವನೆ ಏನಾದರೂ ಇದೆಯೇ?

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ1997-98ನೇ ಸಾಲಿಗೆ ಆಯವ್ಯಯದಲ್ಲಿ ಒಟ್ಟು ರೂ. 788.00 ಲಕ್ಷಗಳನ್ನು ನಿಗದಿಪಡಿಸಲಾಗಿದೆ.

ಆ) 1996-97ನೇ ಸಾಲಿನಲ್ಲಿ ಒಟ್ಟು 7757 ಜನ ಮತೀಯ ಅಲ್ಪಸಂಖ್ಯಾತರುಗಳಿಗೆ ಸಹಾಯವನ್ನು ಒದಗಿಸಲಾಗಿದೆ.

ಇ) ಆಯವ್ಯಯದಲ್ಲಿ ಒದಗಿಸಿರುವ ಮೊತ್ತವಲ್ಲದೇ ಈ ನಿಗಮವು ರಾಷ್ಟ್ರೀಯ ಅಲ್ಪಸಂಖ್ಯಾತರ ಹಣಕಾಸು ಮತ್ತು ಅಭಿವೃದ್ಧಿ ನಿಗಮದಿಂದಲೂ ಇದರ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಸಾಲ ಪಡೆಯುತ್ತಿದೆ.

ಈ) ಪ್ರಸ್ತುತ ಯಾವುದೇ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

ಮೈಸೂರು ನಗರದಲ್ಲಿ ಬಹುಮಹಡಿಗಳ ಕಟ್ಟಡ ನಿರ್ಮಾಣಕ್ಕೆ ಪರವಾನಿಗೆ

2971 - ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿ ಹಾಲಿ ಎಷ್ಟು ಅಂತಸ್ತುಗಳ ವರೆಗೆ ಕಟ್ಟಡ ನಿರ್ಮಾಣ ಮಾಡಲು ಸರ್ಕಾರ ಅನುಮತಿ ನೀಡಿದೆ?

ಆ) ಹಾಗಿದ್ದಲ್ಲಿ ಈ ಸರ್ಕಾರಿ ಆಜ್ಞೆಯನ್ನು ಎಂದಿನಿಂದ ಜಾರಿಗೆ ತರಲಾಗಿದೆ?

ಇ) ಸರ್ಕಾರಕ್ಕೆ ಮೈಸೂರು ನಗರಪಾಲಿಕೆಯಿಂದ ಬಹುಮಹಡಿಗಳ ಕಟ್ಟಡಕ್ಕೆ ಅನುಮತಿ ಕೋರಿ ಮನವಿ ಬಂದಿದೆಯೇ? ಬಂದಿದ್ದಲ್ಲಿ ಎಷ್ಟು ಮಹಡಿಗಳವರೆವಿಗೆ ಕೊಡಲಾಗಿದೆ.

ಈ) ಮೈಸೂರು ನಗರದಲ್ಲಿ ಹಾಲಿ ಇರುವ 3 ಅಂತಸ್ತುಗಿಂತ ಹೆಚ್ಚು ಮಹಡಿ ಕಟ್ಟಲು ಅನುಮತಿ ನೀಡಲು ಸರ್ಕಾರ ಆಲೋಚಿಸುತ್ತಿದೆಯೇ? ಹಾಗಿದ್ದಲ್ಲಿ ಎಷ್ಟು ಮಹಡಿಗಳವರೆವಿಗೆ ಅನುಮತಿ ನೀಡಲಾಗುವುದು?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ಸಚಿವರು) :

ಅ) ನೆಲ ಅಂತಸ್ತು ಮತ್ತು ನಾಲ್ಕು ಅಂತಸ್ತುಗಳಿಗೆ ಕಟ್ಟಡ ಕಟ್ಟಲು ಅನುಮತಿ ನೀಡಲಾಗಿದೆ.

ಆ) 28-12-83ರಿಂದಲೇ ಜಾರಿಗೆ ತರಲಾಗಿದೆ.

ಇ) ಇಲ್ಲ.

ಈ) ಸರ್ಕಾರ ಅನುಮತಿ ನೀಡಿರುವ ಪರಿಷ್ಕೃತ ವ್ಯಾಪಕಾಭಿವೃದ್ಧಿ ಯೋಜನೆಯ ವಲಯ ನಿಯಮಾವಳಿ ಪ್ರಕಾರ ಮಿತವಾದ ಜನಸಂದಣಿ ಇರುವ ಪ್ರದೇಶಗಳಲ್ಲಿ 1000 ಚ.ಮಿ. ಮತ್ತು ಹೆಚ್ಚಿನ ವಿಸ್ತೀರ್ಣ ಜಾಗಕ್ಕೆ ನೆಲ ಅದರಿಸುವಿಕೆ, ನೆಲ ನಿರ್ಮಾಣ ಪ್ರಮಾಣ ಮತ್ತು ಹಾಲಿ ರೆಸ್ತೆಯ ಅಗಲಕ್ಕೆ ಅನುಗುಣವಾಗಿ ನೆಲ ಮತ್ತು 4 ಅಂತಸ್ತಿನವರೆವಿಗೆ ಅನುಮತಿ ನೀಡಲಾಗುವುದು.